**3 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿ.ಸಿ. ಸಂಖ್ಯೆಃ 723/2022**

**ಪಿರ್ಯಾದಿದಾರರುಃ** ರಾಜ್ಯಪರ ಪೊಲೀಸರು,
ಹಿರೀಸಾವೆ ಪೋಲೀಸ್ ಠಾಣೆ.

**ವಿರುದ್ಧ**

**ಆರೋಪಿತರುಃ** ಚೈತ್ರ ಕೋಂ ಮಧು,
ಸುಮಾರು 21 ವರ್ಷ ವಯಸ್ಸು,
ವಾಸಃ ವಳಂಬಿಗೆ ಗ್ರಾಮ,
ಹೊಳೇನರಸೀಪುರ ತಾಲ್ಲೂಕು,
ಹಾಸನ ಜಿಲ್ಲೆ.

**ದೋಷಾರೋಪಣೆ**

**ಶ್ರೀಮತಿ ಸುನೀತ,** 3 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಚನ್ನರಾಯಪಟ್ಟಣ, ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ಚನ್ನರಾಯಪಟ್ಟಣ ತಾಲ್ಲೂಕು, ಹಿರೀಸಾವೆ ಹೋಬಳಿ, ಹಿರೀಸಾವೆ ಪೋಲೀಸ್ ಠಾಣೆಗೆ ಸೇರಿದ ಹಿರೀಸಾವೆ ಟೌನ್ ನಲ್ಲಿ ವಾಸವಿರುವ ಚಾಸಾ−1 ಸುವರ್ಣಮ್ಮ ರವರು ಆರೋಪಿತೆಯ ಚಿಕ್ಕಮ್ಮ ಆಗಿದ್ದು, ದಿಃ 22−04−2021 ರಂದು ಫೋನ್ ಮಾಡಿ ತನ್ನ ಗಂಡ ಮೋಟಾರ್ ಬೈಕಿನಲ್ಲಿ ಬಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಮಕ್ಕಳಾದ ಚಾಸಾ−2 ಇಂಚರ ಮತ್ತು ಚಾಸಾ−3 ಸಹನ ರವರನ್ನು ಕರೆದುಕೊಂಡು ನಿಮ್ಮ ಮನೆಗೆ ಹೋಗು ಎಂದು ಹೇಳಿದ್ದು, ಅದರಂತೆ ಆರೋಪಿತೆ ಚೈತ್ರ ಸುಮಾರು ಮಧ್ಯಾಹ್ನ 12 ಗಂಟೆಗೆ ಚಾಸಾ−1 ರವರ ಮನೆಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ ,ಆ ಮೂಲಕ ಆರೋಪಿಯಾದ ನೀವು **ಭಾ.ದಂ.ಸಂ. ಕಲಂಃ 454** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

**2)** ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಚಾಸಾ-1 ರವರ ಮನೆಗೆ ಬಂದು ಮಕ್ಕಳನ್ನು ಕರೆದುಕೊಂಡು ಮನೆಯಲ್ಲಿರುವ ಸಿಲ್ವರ್ ಡಬ್ಬಗಳನ್ನು ಚೆಕ್ ಮಾಡಿ , ಒಂದು ಸಿಲ್ವರ್ ಡಬ್ಬದಲ್ಲಿಟ್ಟಿದ್ದ 09 ಗ್ರಾಂನ ಒಂದು ಜೊತೆ ಚಿನ್ನದ ಓಲೆ ಇದರ ಅಂದಾಜು ಬೆಲೆ 27,000/- ಮತ್ತು 06 ಗ್ರಾಂ ತೂಕದ ಒಂದು ಚಿನ್ನದ ಉಂಗುರ ಇದರ ಅಂದಾಜು ಬೆಲೆ 18,000/- ಹಾಗೂ 80,000/- ರೂ ನಗದು ಹಣ ಕಳ್ಳತನ ಮಾಡಿ ತೆಗೆದುಕೊಂಡು ಹೋಗಿ ಮನೆಗೆ ಬೇಕಾಗುವ ಸಾಮಾಗ್ರಿಗಳನ್ನು ತೆಗೆದುಕೊಂಡು ಚಿನ್ನವನ್ನು ದಾರಿ ಹೋಕರಿಗೆ 15,000/- ರೂಗಳಿಗೆ ಮಾರಾಟ ಮಾಡಿರುತ್ತೀರಿ , ಆ ಮೂಲಕ ಆರೋಪಿಯಾದ ನೀವು **ಭಾ.ದಂ.ಸಂ. ಕಲಂಃ 380** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಸದರಿ ಆರೋಪಕ್ಕೆ ಆರೋಪಿತರಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ

(ಸುನೀತ )
3 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.